**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿಸಿ ಸಂಖ್ಯೆ : 75/2025**

**ಚಾ.ಸಾಃ 01, ಫ್ರಾ.ಸಾಃ 03**

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಧರ ಮಡಿವಾಳ |
| ತಂದೆಯ ಹೆಸರು | ಹನುಮಂತ ಮಡಿವಾಳ |
| ವಯಸ್ಸು | 49 ವರ್ಷಗಳು |
| ಉದ್ಯೋಗ | ಅಬಕಾರಿ ನಿರೀಕ್ಷಕರು, ಹೊನ್ನಾವರ ವಲಯ |
| ವಾಸ್ತವ್ಯ | ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಅಗಸ್ಟ 2023 ರಿಂದ ನಾನು ಹೊನ್ನಾವರ ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 08-04-2025 ರಂದು ಸಂಜೆ 06-30 ರ ಸಮಯಕ್ಕೆ ನಾನು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಹೊನ್ನಾವರ ತಾಲೂಕಿನ ತಹಶೀಲ್ದಾರವರು ನನ್ನ ಮೊಬೈಲ್ ಗೆ ಫೋನ್ ಮಾಡಿ ಜಲವಳ್ಳಿ ಗ್ರಾಮ ಪಂಚಾಯಿತ ವ್ಯಾಪ್ತಿಯ ಪಡುಕುಳಿ ಗ್ರಾಮದಲ್ಲಿ ವಾಣಿ ಗೋಪಾಲ ಗೌಡ ಎಂಬುವವರು ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದಾಗಿ ಜಿಲ್ಲಾಧಿಕಾರಿಗಳಿಗೆ ದೂರು ಬಂದಿದ್ದು ಸದರಿ ದೂರನ್ನು ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿರುತ್ತಾರೆ. ಅಲ್ಲದೇ ತಮ್ಮ ಕಂದಾಯ ಇಲಾಖೆಯ ನೌಕರರಾದ ಚಾ.ಸಾ. 2 ಮತ್ತು 3 ರವರನ್ನು ನಮ್ಮ ಕಚೇರಿಗೆ ಕಳುಹಿಸಿರುತ್ತಾರೆ. ಅದರಂತೆ ನಾನು ಚಾ.ಸಾ. 2 ಮತ್ತು 3 ರವರನ್ನು ಕರೆದುಕೊಂಡು ಇಲಾಖೆಯ ಸಿಬ್ಬಂದಿಯವರಾದ ಚಾ.ಸಾ. 5 ಮತ್ತು 6 ರವರನ್ನು ಕರೆದುಕೊಂಡು ಬಾತ್ಮಿ ಬಂದಂತೆ ಸಂಜೆ 7.00 ಗಂಟೆಗೆ ಕಚೇರಿಯಿಂದ ಹೊರಟು ಸಂಜೆ 07-15 ರ ವೇಳೆಗೆ ಪಡುಕುಳಿ ಗ್ರಾಮಕ್ಕೆ ತಲುಪಿರುತ್ತೇವೆ. ಬಾತ್ಮಿಯಂತೆ ಪಡುಕುಳಿ ಗ್ರಾಮದ ವಾಣಿ ಗೋಪಾಲ ಗೌಡ ಎಂಬುವವರ ಮನೆಯ ಹತ್ತಿರ ಹೋಗಿ ವಿಚಾರಿಸಲಾಗಿ ಸದರಿ ಮನೆಯಲ್ಲಿ ಒಬ್ಬ ಹೆಂಗಸು ಇದ್ದು, ಅವರನ್ನು ವಿಚಾರಿಸಿದಾಗ ತನ್ನ ಹೆಸರನ್ನು ವಾಣಿ ಗೋಪಾಲ ಗೌಡ ಎಂದು ತಿಳಿಸಿದ್ದು, ತನ್ನ ಗಂಡ ಕೆಲಸದ ನಿಮಿತ್ತ ಹೊರಗೆ ಹೋಗಿರುವುದಾಗಿ ತಿಳಿಸಿರುತ್ತಾರೆ. ಸದರಿ ಮನೆಯನ್ನು ಶೋಧಿಸುವ ಪೂರ್ವದಲ್ಲಿ ಆಕೆಗೆ ಬಾತ್ಮಿಯ ವಿಚಾರವನ್ನು ತಿಳಿಸಿ ಸ್ಥಳದಲ್ಲಿ ಶೋಧನಾ ಸಮುಚ್ಚೆತ್ತವನ್ನು ತಯಾರಿಸಿರುತ್ತೇನೆ. ಶೋಧನಾ ವರದಿಯನ್ನು ಈಗ ನೋಡುತ್ತಿದ್ದು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಆರೋಪಿ ಇದ್ದ ಮನೆಯನ್ನು ಶೋಧನೆ ಮಾಡಿದಾಗ ಮನೆಯ ಪಕ್ಕಕ್ಕೆ ಹೊಂದಿಕೊಂಡಿರುವ ಒಂದು ಅಂಗಡಿಯಲ್ಲಿ ಟೇಬಲ್ ಕೆಳಗೆ ಒಂದು ರಟ್ಟಿನ ಬಾಕ್ಸ ಇದ್ದು, ಅದನ್ನು ತೆರೆದು ಪರಿಶೀಲಿಸಿದಾಗ ಅದರಲ್ಲಿ 90 ಎಂ.ಎಲ್.ನ ಸುಮಾರು 39 ಓ ಸಿ ಟೆಟ್ರಾಗಳು, 90 ಎಂ.ಎಲ್.ನ ಸುಮಾರು 5 ಹೈವರ್ಡ್ಸ ವಿಸ್ಕಿ ಪ್ಯಾಕಗಳು, ಕೆಂಪು ಚೀಲದಲ್ಲಿ 500 ಎಂ.ಎಲ್. ನ 4 ಬಿಯರ್ ಟಿನ್ ಗಳು ಇದ್ದವು. ಸದರಿ

ಮದ್ಯವನ್ನು ಇಟ್ಟುಕೊಳ್ಳಲು ಪಾಸ್ ಅಥವಾ ಪರ್ಮಿಟ್ ಇದೆಯಾ ಎಂದು ಆಕೆಯನ್ನು ವಿಚಾರಿಸಲಾಗಿ ಇಲ್ಲ ಎಂದು ಹೇಳಿರುತ್ತಾರೆ. ನಂತರ ಸ್ಥಳದಲ್ಲಿದ್ದ ಎಲ್ಲಾ ಮುದ್ದೆ ಮಾಲುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಪಂಚನಾಮೆ ಮಾಡಿ ಫೋಟೋ ತೆಗೆಸಿರುತ್ತೇವೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ಸ್ಥಳದ ಕಚ್ಚಾ ನಕಾಶೆ ತಯಾರಿಸಿದ್ದು, ಈಗ ಅದನ್ನು ನೋಡುತ್ತಿದ್ದು, ನಿ.ಪಿ. 3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ. 3(ಸಿ) ಎಂದು ಗುರುತಿಸಲಾಯಿತು. ಸದರಿ ಕೃತ್ಯವನ್ನು ನನ್ನ ಮೊಬೈಲ್ ನಿಂದ ಸಂಪೂರ್ಣವಾಗಿ ಚಾ.ಸಾ. 5 ರವರ ಮೂಲಕ ವಿಡಿಯೋ ಚಿತ್ರಿಕರಣ ಮಾಡಿಸಿರುತ್ತೇವೆ. ಅಲ್ಲದೇ ಫೋಟೋ ತೆಗೆಸಿರುತ್ತೇನೆ. ಸದರಿ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ನಿ.ಪಿ. 4 ರ ಫೋಟೋ ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋ ಮತ್ತು ವಿಡಿಯೋ ಚಿತ್ರೀಕರಣವನ್ನು ಸಿ.ಡಿ. ಯಲ್ಲಿ ಡೌನ್ ಲೋಡ್ ಮಾಡಿಸಿ ಈ ಬಗ್ಗೆ ಕಲಂ 63(4) ಬಿ. ಎಸ್ .ಎ ಕಾಯ್ದೆ ಯಡಿಯಲ್ಲಿ ದೃಢೀಕರಣವನ್ನು ಹಾಜರುಪಡಿಸಿರುತ್ತೇನೆ. ಈಗ ಸಿ.ಡಿ. ಯನ್ನು ನೋಡುತ್ತಿದ್ದು, ನಿ.ಪಿ. 5 ಎಂದು, ದೃಢೀಕರಣವನ್ನು ನಿ.ಪಿ. 6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 6(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು 7.15 ರಿಂದ 8.15 ರ ಸಮಯದಲ್ಲಿ ಮುಗಿಸಿರುತ್ತೇನೆ. ಆರೋಪಿಗೆ ಬಿ ಎನ್ ಎಸ್ ಎಸ್ 35 (3) ರ ಅಡಿಯಲ್ಲಿ ನೊಟೀಸ್ ನೀಡಿ ತನಿಖೆಗೆ ಸಹಕರಿಸುವಂತೆ ಸೂಚಿಸಿರುತ್ತೇನೆ. ನಂತರ ನಂತರ ಮುದ್ದೆ ಮಾಲುಗಳನ್ನು ಠಾಣೆಗೆ ತಂದು ಸರಕಾರದ ಪರವಾಗಿ ದೂರನ್ನು ತಯಾರಿಸಿ ಪ್ರಕರಣ ದಾಖಲಿಸಿರುತ್ತೇನೆ. ದೂರನ್ನು ಈಗ ನೋಡುತ್ತಿದ್ದು, ನಿ.ಪಿ. 7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 7(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿ.ಪಿ. 8 ಎಂದು, ಸಾಕ್ಷಿಯ ಸಹಿಯನ್ನು 8(ಎ) ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇನೆ.

ನಂತರ ಕೇಸಿನ ಕಡತವನ್ನು ಚಾ.ಸಾ. 9 ರವರಿಗೆ ವಹಿಸಿರುತ್ತೇನೆ.

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಆ ದಿನ ಈಕೆಯ ಮನೆಯಲ್ಲಿ ನಾವು ದಾಳಿ ಮಾಡಿದ್ದು ಆ ಕಾಲಕ್ಕೆ ಆರೋಪಿ ಮನೆಯಲ್ಲಿದ್ದು ಮಾಹಿತಿ ನೀಡಿರುತ್ತಾರೆ. ಆ ದಿನ ಅಮಾನತ್ತುಪಡಿಸಿಕೊಂಡ ಮದ್ಯಗಳನ್ನು ನೋಡಿದರೆ ಗುರುತಿಸುತ್ತೇನೆ. ಮುದ್ದೆ ಮಾಲು 1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ. 1 ಮತ್ತು 2 ರಲ್ಲಿರುವ ಸಾಕ್ಷಿ ಸಹಿಯನ್ನು ಮು.ಮಾ. 1(ಸಿ) ಮತ್ತು 2(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತಳ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ತಹಶೀಲ್ದಾರವರು ಜಿಲ್ಲಾಧಿಕಾರಿಯವರಿಗೆ ಬಂದಿದ್ದ ದೂರಿನ ಪ್ರತಿಯನ್ನೇ ಕಚೇರಿಗೆ ಮೇಲ್ ಮಾಡಿದ್ದರು. ಆದ್ದರಿಂದ ಆರೋಪಿಯ ಹೆಸರು ದಾಳಿಯ ಪೂರ್ವದಲ್ಲೇ ಗೊತ್ತಾಗಿರುತ್ತದೆ. ದೂರಿನಲ್ಲಿ ಆರೋಪಿಯ ಹೆಸರು ಇರಲಿಲ್ಲ. ದೂರಿನಲ್ಲಿ ಪಡುಕುಳಿ ಗ್ರಾಮದ ಕೆಲವು ಅಂಗಡಿ ಮತ್ತು ಮನೆಗಳಲ್ಲಿ

ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಆಪಾದಿಸಲಾಗಿತ್ತು. ನಾನು ಪಡುಕುಳಿ ಗ್ರಾಮಕ್ಕೆ ಭೇಟಿ ನೀಡಿದ್ದಾಗ ಸ್ಥಳೀಯ ಮಹಿಳೆಯರನ್ನು ಸಂಪರ್ಕಿಸಿ ಯಾವುದೇ ಮಾಹಿತಿ ಪಡೆದುಕೊಂಡಿಲ್ಲ. ಕಂದಾಯ ಇಲಾಖೆಯ ಸಿಬ್ಬಂದಿಗಳಿಗೆ ಆರೋಪಿಯ ವಿವರ ಗೊತ್ತಿದ್ದರಿಂದ ನಮ್ಮನ್ನು ಅವರು ಕರೆದುಕೊಂಡು ಹೋಗಿರುತ್ತಾರೆ. ಚಾ.ಸಾ. 2 ಮತ್ತು 3 ರವರು ಆರೋಪಿಯ ಹೆಸರು, ವಿಳಾಸ ಮತ್ತು ಮಾಹಿತಿಯನ್ನು ನೀಡಿರುತ್ತಾರೆ. ಆದ್ದರಿಂದ ನಾವು ಅವರನ್ನೇ ಪಂಚರನ್ನಾಗಿ ಮಾಡಿಕೊಂಡಿರುತ್ತೇವೆ. ಆರೋಪಿಯ ಮನೆಗೆ ಹೋದಾಗ ಮನೆಯಲ್ಲಿ ಯಾವುದೇ ಗಿರಾಕಿ ಇರಲಿಲ್ಲ ಯಾವುದೇ ವ್ಯಾಪಾರ ಮಾಡುತ್ತಿರಲಿಲ್ಲ. ಆರೋಪಿಯ ಮನೆಯ ಸುತ್ತಮುತ್ತ ಸಾಕಷ್ಟು ಮನೆಗಳು ಒಂದಕ್ಕೊಂದು ತಾಗಿಕೊಂಡಿವೆ. ಇಲಾಖೆಯ ಜೀಪನ್ನು ನೋಡಿ ಸುತ್ತಮುತ್ತಲಿನ ಯಾವುದೇ ಜನರು ಬಂದಿರುವುದಿಲ್ಲ. ನಾವು ಆರೋಪಿಯ ಮನೆಗೆ ಹೋದಾಗ ಆಕೆ ಮನೆಯ ಒಳಗೆ ಇದ್ದು, ನಾವು ಕರೆದಿದ್ದರಿಂದ ಆಚೆ ಬಂದಿರುತ್ತಾರೆ. ಆರೋಪಿಯ ಮನೆಯಲ್ಲಿ ಆಕೆ ಮತ್ತು ಒಬ್ಬ ಹುಡುಗ ಇದ್ದ. ಆಕೆಗೆ ಮನೆಗೆ ಹೋದಾಗ ಹೆಸರು ವಿಳಾಸ ಕೇಳಿದ್ದೇವೆ. ಆಕೆ ಹೇಳಿರುತ್ತಾಳೆ. ನಾವು ಮನೆ ಸರ್ಚ ಮಾಡಲು ಬಂದಿದ್ದೇವೆ ಎಂದು ಹೇಳಿದ್ದಕ್ಕೆ ಆಕೆ ಮಾಡಿಕೊಳ್ಳಿ ಎಂದು ಹೇಳಿರುತ್ತಾಳೆ. ಆರೋಪಿಯ ಮನೆಗೆ ತಾಗಿ ಒಂದು ಅಂಗಡಿ ಇದ್ದು, ಸದರಿ ಅಂಗಡಿಯಲ್ಲಿ ಒಂದು ಟೇಬಲ್ ಇದ್ದು, ಟೇಬಲ್ ಕೆಳಗಡೆ ಅಕ್ರಮ ಮದ್ಯ ಇತ್ತು. ಆರೋಪಿಯ ಮನೆಯಲ್ಲಿರುವ ಮದ್ಯವನ್ನು ಚಾ.ಸಾ. 6 ರವರು ಹುಡುಕಿರುತ್ತಾರೆ. ಸದರಿ ಅಂಗಡಿಯು ದಿನಸಿ ಅಂಗಡಿ ಆಗಿರುತ್ತದೆ. ಅಕ್ರಮ ಮದ್ಯ ಇದ್ದ ಸ್ಥಿತಿಯಲ್ಲಿ ಫೊಟೋ ತೆಗೆದಿಲ್ಲ ವಿಡಿಯೋ ಮಾಡಿರುತ್ತೇವೆ. ಪಂಚನಾಮೆಯನ್ನು ಸ್ಥಳದಲ್ಲಿ ತಯಾರಿಸಿರುತ್ತೇವೆ. ಮನೆಯ ಮುಂದಿನ ಅಂಗಳದಲ್ಲಿ ಪಂಚನಾಮೆ ತಯಾರಿಸಿರುತ್ತೇವೆ. ನಿ.ಪಿ. 4 ರ ಫೊಟೋದಲ್ಲಿ ಅಂಗಡಿ ಕಾಣುವುದಿಲ್ಲ. ಅಂಗಡಿ ಕಾಣುವಂತೆ ಫೊಟೋ ತೆಗೆಯಲು ತೊಂದರೆ ಇರಲಿಲ್ಲ. ಪಂಚನಾಮೆಯನ್ನು ನಾನೇ ಬರೆಸಿರುತ್ತೇನೆ. ಪಂಚನಾಮೆಯಲ್ಲಿ ರಾಥೋಡರವರು ಮದ್ಯವನ್ನು ಹುಡುಕಿರುತ್ತಾರೆ ಎಂದು ಬರೆಸಿರುತ್ತೇನೆ. ನಾನು ಹೇಳಿರುವಂತೆ ಆರೊಪಿಯ ಮನೆಗೆ ಹೊಂದಿಕೊಂಡಿರುವಂತೆ ಆರೋಪಿಯ ಅಂಗಡಿ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಅಂಗಡಿಯಿಂದ ಯಾವುದೇ ಮದ್ಯವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ಆರೋಪಿಯು ವಾಸವಾಗಿದ್ದ ಮನೆಗೆ ನಾವು ಯಾವತ್ತೂ ದಾಳಿ ಮಾಡೇ ಇಲ್ಲ ಎಂದರೆ ಸರಿಯಲ್ಲ. ಅಬಕಾರಿ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಯವರಿಗೆ ಊರಿನವರು ದೂರು ನೀಡಿದ್ದರಿಂದ ತಪ್ಪಿಸಿಕೊಳ್ಳಲು ಆರೋಪಿಯ ವಿರುದ್ಧ ಈ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**